**ಇಂದು ದಿನಾಂಕಃ 28-11-2023 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಜೆ.ಪಿ.ಎ. ವಕೀಲರಿಂದಃ-

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ಈ ದಾವೆಯನ್ನು ವಾದಿ ಪಾಲುದಾರಿಕೆಗಾಗಿ ಹುಡಿದ್ದಾನೆ. ಈ ದಾವೆಯನ್ನು ವಾದಿ ಅವನ ಸಹೋದರ ಮತ್ತು ಸಹೋದರಿಯರಾದ 6 ಜನರ ವಿರುದ್ದ ಹುಡಿದ್ದಾನೆ. ಶಾಮರಾವ್ ರವರಿಗೆ ಶೇಶಮ್ಮ ಮತ್ತು ಹೇಮಾವತಿ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ಶೇಶಮ್ಮ ರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು ಹಾಗೂ ಹೇಮಾವತಿಗೂ ಸಹ ಇಬ್ಬರು ಗಂಡು ಮಕ್ಕಳ ಮತ್ತು ಒಬ್ಬಳು ಹೆಣ್ಣು ಮಗಳು ಇದ್ದಾರೆ. ಶೇಶಮ್ಮ ರವರು ಈಗ ಜೀವಂತ ಇದ್ದಾರೆ ಎಂದರೆ ಸರಿ. ಹೇಮಾವತಿ ಈಗ ಮೃತಪಟ್ಟಿರುತ್ತಾರೆ. ಮಲ್ಲಿಕಾರ್ಜುನರವರು ಈಗ ಮೃತ ಪಟ್ಟಿರುತ್ತಾರೆಎಂದರೆ ಸರಿ. ಮಲ್ಲಿಕಾರ್ಜುನರವರ ಹೆಂಡತಿ ಮತ್ತು ಇಬ್ಬರು ಮಕ್ಕಳು ಜೀವಂತ ಇದ್ದಾರೆ ಎಂದರೆ ಸರಿ. ಶಾಮರಾವ್ ರವರು ಆಸ್ತಿಗಳು ಹಂಚಿಕೊಂಡಿದ್ದಾರೆ. ಸದರಿ ಪಾಲುಗಾರಿಕೆಯಲ್ಲಿ ವಾದಿಗೆ, ಮಹೇಂದ್ರರವರಿಗೆ, ಪ್ರತಿವಾದಿಗೆ ಮತ್ತು ಮಲ್ಲಿಕಾರ್ಜುನರವರಿಗೆ ತಲಾ 6 ಎಕರೆ ಜಮೀನು ಬಂದಿರುತ್ತದೆ. ಸದರಿ ಪಾಲುಗಾರಿಕೆಯಲ್ಲಿ ಶಾಮರಾವರವರಿಗೆ 5 ಎಕರೆ ಜಮೀನು ಬಂದಿರುತ್ತದೆ. ಪಾಲು ಆದ ರೀತಿಯಲ್ಲಿ ವರ್ಗಾವಣೆಯಾಗಿದೆ ಸಾಕ್ಷಿ ಮುಂದುವರೆದು ಸದರಿ 5 ಎಕರೆ ಜಮೀನು ಜಂಟಿಯಾಗಿ ವರ್ಗಾವಣೆಯಾಗಿದೆ ಎಂದು ನುಡಿಯುತ್ತಾರೆ. ಯಾರ ಹೆಸರಿನಲ್ಲಿ ಸದರಿ 5 ಎಕರೆ ಜಮೀನು ವರ್ಗಾವಣೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ತಂದೆಯ ಆಸ್ತಿಯಾದ 5 ಎಕರೆ ಜಮೀನು ಅವರ ಮಕ್ಕಳಿಗೆ ಬೇಕು ಎಂದು ಕೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. 5 ಎಕರೆ ಜಮೀನಿನಲ್ಲಿ ಶಾಮರಾವರವರ ಎಲ್ಲಾ ಮಕ್ಕಳಿಗೆ ಪಾಲು ಇದೆ ಎಂದರೆ ಸರಿ.

ಪಾಲುಗಾರಿಕೆಯಲ್ಲಿ ಶಾಮರಾವರವರ ಮಕ್ಕಳಿಗೆ ಯಾವ ಸ.ನಂ ನಲ್ಲಿ ಜಮೀನು ಬಂದಿದೆ ಎಂದು ನನಗೆ ಗೊತ್ತಿಲ್ಲ. ಪಾಲುಗಾರಿಕೆ ಸಮಯದಲ್ಲಿ ನಾನು ಇದ್ದೆ. ವಾದಿಗೆ ಸ.ನಂ 36/3 ರಲ್ಲಿ 5 ಎಕರೆ 36 ಗುಂಟೆ, ಸ.ನಂ 4/1 ರಲ್ಲಿ 1 ಎಕರೆ 39 ಗುಂಟೆ ಹಾಗೂ ಸ.ನಂ 5/5 ರಲ್ಲಿ 6 ಎಕರೆ 1 ಗುಂಟೆ ಜಮೀನು ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸ.ನಂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ವಾದಿಗೆ ಪಾಲುಗಾರಿಕೆಯಲ್ಲಿ 13 ಎಕರೆಗಿಂತ ಜಾಸ್ತಿ ಜಮೀನು ಬಂದಿದೆ ಎಂದರೆ ಸರಿ. ಮಹೇಂದ್ರರವರಿಗೆ ಸ.ನಂ 5/1 ರಲ್ಲಿ 2 ಎಕರೆ 36 ಗುಂಟೆ ಮತ್ತು ಸ.ನಂ 4/1 ರಲ್ಲಿ 3 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ಮಲ್ಲಿಕಾರ್ನುರವರಿಗೆ ಸ.ನಂ 72 ರಲ್ಲಿ 8 ಎಕರೆ ಜಮೀನು ಬಂದಿದೆ ಎಂದರೆ ಸರಿ. ಅರವಿಂದರವರಿಗೆ ಸ.ನಂ 72 ರಲ್ಲಿ 3 ಎಕರೆ 39 ಗುಂಟೆ

ಮತ್ತು 1 ಎಕರೆ ಹಾಗೂ ಸ.ನಂ 4/1 ರಲ್ಲಿ 5 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ಈ ರೀತಿ ಹಂಚಿಕೊಂಡು ಅವರು ತಮ್ಮ ಪಾಲಿನಲ್ಲಿ ಮಾಲೀಕ ಮತ್ತು ಖಬ್ಜಿದಾರ ಇದ್ದಾರ ಎಂದರೆ ಸರಿ.

ಈ ರೀತಿ ಹಂಚಿಕೊಂಡ ಸಮಯದಲ್ಲಿ ಅರವಿಂದ ಚಿಕ್ಕವನಿದ್ದ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಹೇಂದ್ರ ಸಹ ಚಿಕ್ಕವನಿದ್ದ ಎಂದು ನುಡಿಯುತ್ತಾರೆ. ಹಂಚಿಕೊಳ್ಳುವ ಸಮಯಕ್ಕೆ ಮಹೇಂದ್ರ ಮತ್ತು ಅರವಿಂದ ಚಿಕ್ಕವರಿದ್ದ ಕಾರಣ ಅವರಿಗೆ ಬಂದ ಜಮೀನುಗಳು ಅವರ ತಾಯಂದಿರ ಹೆಸರಿನಲ್ಲಿ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಹೇಮಾವತಿರವರು ಮೃತಪಟ್ಟ ಮೇಲೆ ಪ್ರತಿವಾದಿ ಹೇಮಾವತಿ ಹೆಸರಿನಲ್ಲಿರುವ ಜಮೀನುಗಳು ವರ್ಗಾವಣೆ ಮಾಡಲು ಅರ್ಜಿ ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಗುಲ್ಬರ್ಗಾದಲ್ಲಿ ವಾಸವಿದ್ದಾನೆ ಎಂದರೆ ಸರಿ. ಆದ್ದರಿಂದ ಅರವಿಂದ ಸದರಿ ಹೇಮಾವತಿರವರ ಹೆಸರಿನಲ್ಲಿರುವ ಜಮೀನು ತನ್ನ ಹೆಸರಿಗೆ ವರ್ಗಾವಣೆ ಮಾಡಿ ಮಲ್ಲಿಕಾರ್ಜುನರವರಿಗೆ ಮಾರಾಟ ಮಾಡಬೇಕು ಎಂದು ಯೋಚಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ಶ್ಯಾಮರಾವರವರ ಆಸ್ತಿ ಇದೆ ಎಂದು ವಾದಿ ಈ ದಾವೆಯನ್ನು ಹುಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಶ್ಯಾಮರಾವರವರ ಆಸ್ತಿ ಎಂದು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಪಾಲು ಬೇಕು ಈ ದಾವೆಯನ್ನು ಹುಡಿಲ್ಲ ಎಂದರೆ ಸರಿಯಲ್ಲ.

ಪಾಲುಗಾರಿಕೆ ಪ್ರಕಾರ ವಾದಿ ಮತ್ತು ಪ್ರತಿವಾದಿಗೆ ಬಂದ ಪಾಲಿನಲ್ಲಿರುವ ಜಮೀನುಗಳಲ್ಲಿ ವಾದಿ ಮತ್ತು ಪ್ರತಿವಾದಿಯರು ಮಾಲೀಕ ಮತ್ತು ಖಬ್ಜದಾರರು ಇದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಉಳಿದ 5 ಎಕರೆ ಜಮೀನನಲ್ಲಿ ಒಟ್ಟಿಗೆ ಮಾಲೀಕರು ಇದ್ದಾರೆ ಎಂದು ನುಡಿಯುತ್ತಾರೆ. ವಾದಿಯ ಜೊತೆ ನನ್ನ ವ್ಯವಹಾರ ಇದ್ದ ಕಾರಣ ವಾದಿಯ ಮಾತು ಕೇಳಿ ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ಎಕರೆ ಜಮೀನಿನಲ್ಲಿ ಅರ್ಧ ಭಾಗದಲ್ಲಿ ವಾದಿ ಮಾಲೀಕ ಮತ್ತು ಖಬ್ಜದಾರ ಇದ್ದಾನೆ ಎಂದು ಈ ದಾವೆಯನ್ನು ಹುಡಿದ್ದಾನೆ ಎಂದರೆ ಸಾಕ್ಷಿ ತಂದೆ ಆಸ್ತಿಯಲ್ಲಿ ಪಾಲು ಬೇಕು ಎಂದು ಹುಡಿದ್ದಾನೆ ಎಂದು ನುಡಿಯುತ್ತಾನೆ. ನನಗೆ ಈ ದಾವೆ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಪಾಲಿಗೆ ಬಂದಿರುವ ಜಮೀನಿನಲ್ಲಿ ಅವರ ತಂದೆಗೆ ನೀಡಿರುವುದಿಲ್ಲ. ಒಟ್ಟಿನಲ್ಲಿ ಇದ್ದಾಗ 5 ಎಕರೆ ಜಮೀನು ಶ್ಯಾಮರಾವರವರಿಗೆ ನೀಡಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲುಗಾರಿಕೆ ಸಮಯದಲ್ಲಿ ನಾನು ಇರುವ ಬಗ್ಗೆ ಮತ್ತು ಸದರಿ ಜಮೀನುಗಳಲ್ಲಿ ನಾನು ಉಳಿಮೆ ಮಾಡಿರುವ ಬಗ್ಗೆ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಪ್ಪು ಬರೆಸಿದ್ದೇನೆ ಎಂದರೆ ಸರಿಯಲ್ಲ. ಪಾಲುಗಾರಿಕೆ ಸಮಯದಲ್ಲಿ ಯಾರು ಹಿರಿಯರು ಇದ್ದರು ಎಂದರೆ ಸಾಕ್ಷಿ ಶ್ಯಾಮರಾವರವರ ತಂದೆ ತಾಯಿ ಇದ್ದರು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿರುವಂತೆ ಪಾಲುಗಾರಿಕೆ ಸಮಯದಲ್ಲಿ ಗ್ರಾಮದ ಹಿರಿಯರು ಯಾರು ಎಂದರೆ ಸಾಕ್ಷಿ ನಾನು ಮತ್ತು ಲಕ್ಷ್ಮಣರವರು ಇದ್ದೇವು ಎಂದು ನುಡಿಯುತ್ತಾರೆ. ಲಕ್ಷ್ಮಣರವರ ಹೆಸರಿ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ. ಪಾಲುಗಾರಿಕೆ ಸಮಯದಲ್ಲಿ ನಾನು ಅಥವಾ ಲಕ್ಷ್ಮಣರವರ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಹಣ ಪಡೆದುಕೊಳ್ಳಲು ಸುಳ್ಳು ದಾವೆಯನ್ನು ಹುಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**